ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
ಸಿ.ಸಿ.**1050/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಸುನಿಲ್ ಕುಮಾರ್ | ಫ್ರಾಸಾ-4 |
| ತಂದೆಯ ಹೆಸರು | : ಶಂಕರಯ್ಯ | ಚಾಸಾ-5 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಐ. | ದಿನಾಂಕಃ 11.02.2025 |
| ವಾಸಸ್ಥಳ | : ಮಹಿಳಾ ಪೋಲಿಸ್ ಠಾಣೆ, ಪುತ್ತೂರು. | |

:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾಸ.ಸ.ಅ. ರವರಿಂದ:

ನಾನು ಸೆಪ್ಟೆಂಬರ್ 2018 ರಿಂದ ನವೆಂಬರ್ 2019 ರವರೆಗೂ ಚಿಕ್ಕಮಗಳೂರಿನ ಪೋಲಿಸ್ ಫಾರೆಸ್ಟ್ ಮೊಬೈಲ್ ಸ್ಕ್ವಾಡ್ ನಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.17.02.2019 ರಂದು ನಾನು, ಚಾಸಾ-8 ಮತ್ತು 9 ರವರೊಂದಿಗೆ ಚಿಕ್ಕಮಗಳೂರಿನಲ್ಲಿ ಗಸ್ತಿನಲ್ಲಿ ಇರುವಾಗ ಮೂಡಿಗೆರಯ ಗೌಡಹಳ್ಳಿಯಲ್ಲಿ 4 ಜನ ವ್ಯಕ್ತಿಗಳು ಪ್ರಾಣಿಗಳ ಅಂಗಾಗವನ್ನು ಮಾರಾಟ ಮಾಡುತ್ತಿದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ನಾವುಗಳು ಸದರಿ ಮಾಹಿತಿಯನ್ನು ಚಾಸಾ-1 ರವರಿಗೆ ತಿಳಿಸಿ ಕಾರ್ಯಚರಣೆಗೆ ಸಹಕರಿಸುವಂತೆ ಕೋರಿರುತ್ತೇನೆ. ನಂತರ ಚಾಸಾ-1 ರವರು ತಮ್ಮ ಸಿಬ್ಬಂದಿಗಳಾದ ಚಾಸಾ-6, 7 ಮತ್ತು 10 ರವರನ್ನು ನಮ್ಮೊಂದಿಗೆ ಕಳುಹಿಸಿದ್ದು ನಾವೆಲ್ಲರೂ ಗೌಡಹಳ್ಳಿ ಬಸ್ ನಿಲ್ದಾಣದಿಂದ ಸ್ವಲ್ಪ ಹಿಂದೆ ನಮ್ಮ ವಾಹನಗಳನ್ನು ನಿಲ್ಲಿಸಿ ಬಸ್ ಸ್ಟಾಂಡ್ ಬಳಿ ತಲುಪಿ ನೋಡಿದಾಗ ಅಲ್ಲಿ 4 ಜನ ವ್ಯಕ್ತಿಗಳು ಇದ್ದು ಆ ಪೈಕಿ  ಒರ್ವ ಮಹಿಳೆ ಇದ್ದರು. ಸದರಿ ವ್ಯಕ್ತಿಗಳ ಬಳಿ ಇದ್ದ ಒಂದು ಚೀಲದಲ್ಲಿ ಕಡವೆಯ ಕೊಂಬುಗಳು ಇದ್ದ ಹಾಗೇ ಕಂಡುಬಂತು. ಸದರಿ ವಸ್ತುವನ್ನು ನಾವು ಪರಿಶೀಲಿಸಿದಾಗ ಎರಡು ಜೊತೆ ಕಡವೆಯ ಕೊಂಬುಗಳು ದೊರೆತಿದ್ದು, ಒಂದು ಜೊತೆ ಕೊಂಬು ಬುರುಡೆ ಸಮೇತ ಇದ್ದು ಮತ್ತೊಂದು ಜೊತೆ ಕೊಂಬನ್ನು ಮರದ ಆಕಾರದ ಒಂದು ವಸ್ತುವಿಗೆ ಜೋಡಿಸಲಾಗಿತ್ತು. ಸದರಿ ವಸ್ತುಗಳನ್ನು ರಾ.10.15 ರಿಂದ 11.30 ರವರೆಗೂ ಮಹಜರ್ ಬರೆದು ವಶಕ್ಕೆ ಪಡೆದೆವು. ಸ್ಥಳದಲ್ಲಿ ಇದ್ದ ವ್ಯಕ್ತಿಗಳ ಹೆಸರು ನನಗೆ ಈಗ ನೆನಪಾಗುತ್ತಿಲ್ಲ. ನಂತರ ಸ್ಥಳದಲ್ಲಿ ಸಿಕ್ಕ ವಸ್ತುಗಳನ್ನು ಅರಣ್ಯ ಇಲಾಖೆ ಸಿಬ್ಬಂದಿಯವರಿಗೆ ಕೊಟ್ಟು ನಾವು ವಾಪಸ್ಸು ಬಂದಿದ್ದೇವೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-10 ಮತ್ತು 11 ರ ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.1 ಮತ್ತು 2 ರ ವಸ್ತುಗಳನ್ನು ನೋಡಿ ಅವುಗಳನ್ನು ಮೇಲೆ ಹೇಳಿದ ಸಮಯಕ್ಕೆ ವಶಕ್ಕೆ ಪಡೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 4 ನೇ ಆರೋಪಿತರನ್ನು ನೋಡಿ ಎಂ.ಒ.1 ಮತ್ತು 2 ರ ವಸ್ತುಗಳನ್ನು ವಶದಲ್ಲಿ ಇಟ್ಟುಕೊಂಡಿದ್ದ ವ್ಯಕ್ತಿಗಳು ಇವರೇ ಎಂದು ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ

ದಾಳಿ ಮಾಡಲಾಯಿತು ಎಂದು ಹೇಳಲಾದ ದಿನ ಯಾವ ವಾರ ಎಂದು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಹೆಸರು ನನ್ನಿಂದ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಬರೆಯಲಾಯಿತು ಎಂದು ಹೇಳಲಾದ ಮಹಜರ್ ನ್ನು ಅರಣ್ಯ ಇಲಾಖೆಯವರು ಒಬ್ಬರು ಬರೆದಿದ್ದು ಅವರ ಹೆಸರು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ಇದ್ದರು ಎಂದು ಹೇಳಲಾದ ಮಹಿಳೆ ಮತ್ತು ಇಬ್ಬರು ಸ್ವತಂತ್ರ ವ್ಯಕ್ತಿಗಳ ಸಹಿಯನ್ನು ಮಹಜರ್ ಗೆ ಪಡೆಯಲಾಗಿಲ್ಲ. ಸದರಿ ವ್ಯಕ್ತಿಗಳು ಮಹಜರ್ ಕಾಲಕ್ಕೆ ಹಾಜರಿದ್ದರು ಎಂದು ಮಹಜರ್ ನಲ್ಲಿ ನಮೂದಿಸಲಾಗಿಲ್ಲ. ನಾನು ಹೇಳಿದ ಸ್ಥಳದಲ್ಲಿ ಪೋಟೋ ತೆಗೆಯಲಾಗಿಲ್ಲ. ಆ ದಿನ ನನ್ನ ಹಾಗೂ ಇತರೆ ಸಿಬ್ಬಂದಿಗಳ ಬಳಿ ಪೋಟೋ ತೆಗೆಯುವ ಸೌಲಭ್ಯವಿರುವ ಮೊಬೈಲ್ ಗಳು ಇತ್ತು ಎಂದರೆ ಸರಿ. ನಿಪಿ-10 ಮತ್ತು 11 ರ ಪೋಟೋಗಳನ್ನು ಮೂಡಿಗೆರೆ ಅರಣ್ಯ ಇಲಾಖೆಯ ಕಚೇರಿಯಲ್ಲಿ ತೆಗೆಯಲಾಗಿದೆ ಎಂದರೆ ಸರಿ.

ಸ್ಥಳದಲ್ಲಿ ಮಹಜರ್ ಬರೆಯುವ ಕಾಲಕ್ಕೆ FOC ಸಂಖ್ಯೆ ನನಗೆ ಗೊತ್ತಿರಲಿಲ್ಲ. ಸದರಿ FOC ಸಂಖ್ಯೆ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಗೊತ್ತಿತ್ತ ಎಂದು ನನಗೆ ಗೊತ್ತಿಲ್ಲ. ಪೋಲಿಸ್ ಇಲಾಖೆ ಮತ್ತು ಅರಣ್ಯ ಇಲಾಖೆಯಿಂದ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದರೆ ಆ ರೀತಿ ವಶಕ್ಕೆ ಪಡೆದ ವಸ್ತುಗಳ ಮೇಲೆ ಪ್ರಕರಣ ಸಂಖ್ಯೆ ಬರೆಯಲಾಗುತ್ತದೆ ಎಂದರೆ ಸರಿ. ಸದರಿ ಕ್ರಮವನ್ನು ವಶಕ್ಕೆ ಪಡೆದ ವಸ್ತುಗಳ ಗುರುತುವಿಕೆಗೆ ಮಾಡಲಾಗುತ್ತದೆ ಎಂದರೆ ಸರಿ. ನಾನು ಹೇಳಿದ ದಿನಾಂಕದಂದು ಸ್ಥಳದಲ್ಲಿ ಸಿಕ್ಕ ವಸ್ತುಗಳ ಮೇಲೆ FOC ಸಂಖ್ಯೆ ಯನ್ನು ಅರಣ್ಯ ಇಲಾಖೆಯವರು ನಮೂದು ಮಾಡಿದ್ದರು. ಈ ವಿಚಾರವನ್ನು ಮಹಜರ್ ನಲ್ಲಿ ಬರೆಯಾಗಿದೆಯಾ ಎಂದು ನನಗೆ ನೆನಪಿಲ್ಲ. ಆ ಸಂಖ್ಯೆಗಳನ್ನು ಯಾವುದರಿಂದ ಬರೆಯಲಾಗಿದೆ ಎಂದು ನೆನಪಾಗುತ್ತಿಲ್ಲ. ಮೊಕದ್ದಮೆ ಸಂಖ್ಯೆಗಳನ್ನು ಪೈಂಟ್ ನಿಂದ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಸ್ಥಳದಲ್ಲಿ ವಶಪಡಿಸಿಕೊಂಡ ವಸ್ತುಗಳನ್ನೇ ವಿಚಾರಣೆ ಕಾಲಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಾರೆ ಎಂದರೆ ಸರಿ.

ಎಂ.ಒ.1 ಮತ್ತು 2 ರ ಮೇಲೆ FOC ಸಂಖ್ಯೆಗಳು ಕಾಣುತ್ತಿಲ್ಲ ಎಂದರೆ ಸರಿ. FOC ಸಂಖ್ಯೆಗಳನ್ನು ನಮೂದಿಸಿದ ಹೊರತು ಸ್ಥಳದಲ್ಲಿ ಸಿಕ್ಕ ವಸ್ತುಗಳ ಮೇಲೆ ಯಾವುದೇ ವಿಶೇಷ ನಡಾವಳಿಕೆಗಳನ್ನು ಮಾಡಲಿಲ್ಲ. ಎಂ.ಒ.1 ಮತ್ತು 2 ರ ಮೇಲೆ ಕೆಂಪು ಮತ್ತು ಹಳದಿ ಬಣ್ಣದಿಂದ ಬರವಣಿಗೆ ಮಾಡಲಾಗಿದೆ ಎಂದರೆ ಸರಿ. ಆ ಬರವಣಿಗೆಗಳನ್ನು ಎಲ್ಲಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸ್ಥಳದ ಚೆಕ್ಕುಬಂದಿ ನನಗೆ ನೆನಪಿಲ್ಲ. ನಾನು ಹೇಳಿದಂತೆ ಸ್ಥಳಕ್ಕೆ ಹೋಗಿ ಅಲ್ಲಿ ವಸ್ತುಗಳನ್ನು ವಶಕ್ಕೆ ಪಡೆದು ಮಹಜರ್ ಬರೆದಿದ್ದರೆ ಸ್ಥಳದಲ್ಲಿ ಇದ್ದರು ಎಂದು ಹೇಳಲಾದ ಇಬ್ಬರು ವ್ಯಕ್ತಿಗಳು ಹಾಗು ಮತ್ತೊಬ್ಬ ಮಹಿಳೆಯ ಸಹಿ ಪಡೆಯಬೇಕಾಗಿತ್ತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳು ಮಹಜರ್ ಗೆ ಸಹಿ ಮಾಡಲು ತಿರಸ್ಕರಿಸಿದ್ದಾರೆ ಎಂದು ಸಹಾ ನಿಪಿ-2 ರಲ್ಲಿ ನಮೂದಿಲ್ಲ ಎಂದರೆ ಸರಿ. ಸದರಿ ಮಹಜರ್ ಗೆ 6 ಜನ ಸಹಿ ಮಾಡಿದ್ದಾರೆ. ನಿಪಿ-2 ರಲ್ಲಿ 6 ಕ್ಕಿಂತ ಹೆಚ್ಚು ಜನರ ಸಹಿ ಇದೆ ಎಂದರೆ ಸರಿ. ನಾನು ಪೋಲಿಸ್ ಇಲಾಖೆಯಲ್ಲಿ ಇದ್ದು ಅರಣ್ಯ ಇಲಾಖೆಯ ಗಸ್ತು ಕೆಲಸ ಮಾಡುತ್ತಿದ್ದೆ ಎಂದರೆ ಸರಿ.

ಯಾವುದಾದರೂ ವಸ್ಥವನ್ನು ವಶಕ್ಕೆ ಪಡೆದರೆ ಅಂತಹ ವಸ್ತುಗಳ ಚಹರೆಯನ್ನು ಮಹಜರ್ ನಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಎಂ.ಒ.1 ರಲ್ಲಿ ಇರುವ ಮರದ ಮೇಲೆ ಬಿಳಿ ಮತ್ತು ಕೆಂಪು ಬಣ್ಣದ ಪೈಂಟ್ ಇದ್ದು ಈ ವಿಚಾರವನ್ನು ನಿಪಿ-2 ರ ಮಹಜರ್ ನಲ್ಲಿ ನಮೂದು ಮಾಡಲಾಗಿಲ್ಲ ಎಂದರೆ

ಸರಿಯಲ್ಲ. ಎಂ.ಒ.1 ಮತ್ತು 2 ರ ವಸ್ತುಗಳನ್ನು ನಾವು ಮತ್ತು ಅರಣ್ಯ ಇಲಾಖೆಯವರು ಸೇರಿ ಕಚೇರಿಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಕಾರಣ ನಿಪಿ-2 ಕ್ಕೆ ಸ್ವತಂತ್ರ ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಎಂ.ಒ.1 ಮತ್ತು 2 ರ ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.